ಹೀಗೆ ಹಳೆಯ ವಿದ್ಯಾರ್ಥಿಗಳ ಕಾರ್ಯಕ್ರಮದ ಭೇಟಿಬಿಂದುವಿನಿಂದ ನಿರ್ದೇಶಕರು ಇನ್ನೊಂದು ರೇಖೆ ಎಳೆಯುತ್ತಾರೆ. ಇಬ್ಬರೂ ರಾತ್ರಿ ಒಟ್ಟಾಗಿ ಕಳೆಯುತ್ತಾರೆ. ಅವನ ಜುಂಪರು ಕೂದಲು, ದಟ್ಟವಾಗಿ ಬೆಳೆದ ಗಡ್ಡವನ್ನು ಆ ರಾತ್ರಿಯಲ್ಲಿ ಸಲೂನಿನವನಿಂದ ಟ್ರಿಮ್ ಮಾಡಿಸುತ್ತಾಳೆ. 'ಹತ್ತನೇ ಕ್ಲಾಸಿನ ರೀತಿ ಕಟ್ ಮಾಡಿ' ಎನ್ನುವುದು ಅವಳ ಬೇಡಿಕೆ. ಹೇರ್ ಕಟ್ ಮಾಡುವವನಿಗೂ ಕಥಾನಾಯಕನ ಪ್ರೇಮ ಪ್ರಸಂಗ ಗೊತ್ತಿದೆ ಎಂಬಲ್ಲಿಗೆ ಅವನ ಮಾನವ ಪ್ರೇಮದ ಇನ್ನೊಂದು ಅನಾವರಣ.

ನಾಯಕಿಯನ್ನು ಹೋಟೆಲ್ ರೂಮಿಗೆ ಬಿಡಲು ಹೋಗುವ ನಾಯಕ. ಇಬ್ಬರ ನಡುವಿನ ಚಡಪಡಿಕೆ. ನೆನಪುಗಳ ನೇವರಿಕೆ. ಈ ದಿನಮಾನದ ಬದುಕಿನ ಕುರಿತ ಬದ್ಧತೆ ಎಲ್ಲವೂ ನವಿರಾಗಿ, ಸಂಗೀತಮಯವಾಗಿ, ಸಾವಧಾನವಾಗಿ ಪ್ರಕಟಗೊಳ್ಳುತ್ತವೆ.

ಮಳೆ ಸುರಿದ ರಾತ್ರಿಯಲ್ಲಿ ಇಬ್ಬರೂ ಮನೆ ಪ್ರವೇಶಿಸುತ್ತಾರೆ. ಅದು ನಾಯಕನ ಮನೆ. ಅವಳು ಮಾಡಿದ ಅಡುಗೆಯನ್ನು ಅವನು ಎಷ್ಟೋ ವರ್ಷ ಹಸಿದಿರುವವನಂತೆ ಉಣ್ಣುತ್ತಾನೆ. 'ನೀನು ಚೆನ್ನಾಗಿದ್ದೀಯ' ಎಂಬ ಅವನ ಕುಶಲೋಪರಿಗೆ ನಾಯಕಿಯಿಂದ ಬರುವುದು ಅಡ್ಡಗೋಡೆ ಮೇಲೆ ದೀಪ ಇಟ್ಟಂಥ ಉತ್ತರ. ನೆಂದ ಅವಳ ಬಟ್ಟೆಯನ್ನು ಹರವಿ, ಅವನ ಅಂಗಿಯನ್ನು ತೊಟ್ಟ ಅವಳೆದುರು ಅವನು ಮಗುವೇ ಆಗಿಬಿಡುತ್ತಾನೆ. ಕರೆಂಟ್ ಹೋಗುತ್ತದೆ. ಬೆಳಕು ತರಲು ತಕ್ಷಣ ಅವನು ಹೊರಟ. ಆಗ ಅವಳು 'ಯಮುನೈ ಆಟ್ರಿಲೆ' ಹಾಡತೊಡಗಬೇಕೆ? ಅವನಲ್ಲಿ ಕಂಪನ. ನಮ್ಮ ಕಣ್ಣಾಲಿಗಳಲ್ಲಿ ನೀರು. ಬೆಳಕಿನ ಸಮೇತ ಅವಳತ್ತ ಧಾವಿಸುವ ಅವನಿಗೆ ತನ್ನ ಹಾಡೆಂಬ ನಕ್ಷತ್ರ ಕೈಗೆಟುಕಿದ ಧನ್ಯತೆ. ಊಟವಾಯಿತು, ಹಾಡಾಯಿತು. ಮಂಚದ ಮೇಲೆ ಅವಳ ನಿದ್ರೆ. ದೂರದಿಂದಲೇ ನಟಿಕೆ ತೆಗೆದು ದೃಷ್ಟಿ ನಿವಾಳಿಸುವ ಅವನು ಕೆಳಗೆ ಮಲಗುತ್ತಾನೆ. ಪ್ರೇಮ ಯಾವುದೇ ಹಂತದಲ್ಲೂ

